ದಿನಾಂಕಃ 28-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ_ಪಾಟಿ_ಸವಾಲುಃ- ಪ್ರತಿವಾದಿ 1 ರಿಂದ 3, 12 ರಿಂದ 14 ರ ಪರವಾಗಿ ಶ್ರೀ ಕೆ ಸಿ ಪಿ ವಕೀಲರಿಂದ

ಈ ದಾವೆಗೆ ಸಂಬಂಧಪಟ್ಟಂತೆ ಹಾಗೂ ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ಸಂಬಂಧಪಟ್ಟಂತೆ ನಾನು ಮಹಾವಾಖ್ಯಾನಂದ ಸ್ವಾಮೀಗಳ ಜೊತೆ, ಹರ್ಷಾನಂದ ಸ್ವಾಮೀಗಳ ಜೊತೆ ಹಾಗೂ ಶಾಂತಿಮಯಾನಂದ ಸ್ವಾಮೀಗಳ ಜೊತೆ ಭೇಟಿಯಾಗಿ ಮಾಹಿತಿಯನ್ನು ಪಡೆದುಕೊಂಡು ಬಂದಿರುವೆನು. ದಾವಾ ಆಸ್ತಿ ರಿ ಸ ನಂ. 22/1 ರ ಜಮೀನಿನಲ್ಲಿ ಈಗ ಒಂದು ಪ್ರಾರ್ಥನಾ ಮಂದಿರ ಹಾಗೂ ಒಂದು ಬಾವಿ ಇರುವುದು. ನಾನು ಸುಮಾರು 5-6 ತಿಂಗಳುಗಳ ಹಿಂದೆ ಇವುಗಳನ್ನು ನೋಡಿರುವೆನು. ರಿ ಸ ನಂ. 22/1 ರ ಜಮೀನಿನ ಚಕ್ಕಬಂದಿ ನನಗೆ ಈಗ ನನಗೆ ನೆನಪಿರುವುದಿಲ್ಲ. ಈ ಜಮೀನಿನ ಯಾವ ದಿಕ್ಕಿನಲ್ಲಿ ಪ್ರಾರ್ಥನಾ ಮಂದಿರ ಮತ್ತು ಬಾವಿ ಇರುವುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಈ ಪ್ರಾರ್ಥನಾ ಮಂದಿರದ ವಿಸ್ತೀರ್ಣ ಹಾಗೂ ಬಾವಿಯ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ಈ ಪ್ರಾರ್ಥನಾ ಮಂದಿರದ ಮೇಲ್ಹಾವಣಿ ಸೀಟದನು ಆಗುವುದು. ಆದರೆ ಯಾವ ತರಹದ ಸೀಟು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನಾನು ಈ ಪ್ರಾರ್ಥನಾ ಮಂದಿರದ ಒಳಗಡೆ ಹೋಗಿ ನೋಡಿರುವುದಿಲ್ಲ. ಈ ಬಾವಿಯು ಸುಮಾರು 10 ಅಡಿ ಅಗಲದಷ್ಟು ಇರುವುದು. ಆಳ ಎಷ್ಟು ಇರುವುದರ ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಆ ಬಾವಿಯಲ್ಲಿ ನೀರು ಸಿಹಿಯಾಗಿರುವುದು ಅಥವಾ ಸವಳು ಆಗಿರುವುದು ಮಹಾವಾಖ್ಯಾನಂದ ಸ್ವಾಮೀಗಳ ಜೊತೆ, ಹರ್ಷಾನಂದ ಸ್ವಾಮೀಗಳ ಜೊತೆ ಹಾಗೂ ಶಾಂತಿಮಯಾನಂದ ಸ್ವಾಮೀಗಳ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಪ್ರಾರ್ಥನಾ ಮಂದಿರಕ್ಕೆ ವಿದ್ಯುತ ಸಂಪರ್ಕ ಕಲ್ಪಿಸಿದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಬಾವಿಗೆ ಇಳಿಯಲು ಮೆಟ್ಟಿಲುಗಳು ಇರುವವೋ ಅಥವಾ ಸೇದುವ ಬಾವಿ

ಇರುವುದು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರಿ ಸ ನಂ. 22/1 ರ ಜಮೀನಿನಲ್ಲಿ ಯಾವುದೇ ಪ್ರಾರ್ಥನಾ ಮಂದಿರ ಹಾಗೂ ಬಾವಿ ಇರುವುದಿಲ್ಲ ಅಂದರೆ ಸರಿಯಲ್ಲ. ಈ ಆಸ್ತಿಯಲ್ಲಿ ನಮ್ಮ ಮಠದಿಂದ ಇವತ್ತಿನವರೆಗೂ ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿರುವುದಿಲ್ಲ ಈ ಜಮೀನಿನಲ್ಲಿ ಗಿರಿಯಪ್ಪಗೌಡ ಧಾರ್ಮಿಕ ಕಾರ್ಯಕ್ರಮ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ ಈ ಜಮೀನಿನಲ್ಲಿ ಗಿರಿಯಪ್ಪಗೌಡನನ್ನು ಹೊರತುಪಡಿಸಿ ಬೇರೆ ಸಾರ್ವಜನಿಕರು ಶ್ರೀ ರಾಮಕೃಷ್ಣ ಪರಮಹಂಸ ಮಠದ ಪರವಾಗಿ ಯಾವುದೇ ಧಾರ್ಮಿಕ ಕಾರ್ಯಕ್ರಮ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಈ ಆಸ್ತಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಕಾರ್ಯಕ್ರಮಗಳು ನಡೆದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಕುನ್ನೂರು ಗ್ರಾಮದ ಸುತ್ತಮುತ್ತ ಯಾವುದೇ ಶ್ರೀ ರಾಮಕೃಷ್ಣ ಪರಮಹಂಸರ ಮಠದ ಚಟುವಟಿಕೆಗಳು ಇರುವುದಿಲ್ಲ. ಆದರೆ ಹುಬ್ಬಳ್ಳಿ ಮತ್ತು ಡಾವಣಗೇರಿಯಲ್ಲಿ ಇರುವವು.

ವಾದಪತ್ರದಲ್ಲಿ ಬರೆಸಿಹಾಕಿರುವ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದು. ರಾಮಕೃಷ್ಣ ಪರಮಹಂಸ ಮಠದ ಚಟುವಟಿಕೆಗಳು ಹುಬ್ಬಳ್ಳಿ, ಗದಗ ಮತ್ತು ಡಾವಣಗೇರಿಯಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ಗಿರಿಯಪ್ಪಗೌಡ ನಮ್ಮ ಮಠದಲ್ಲಿ ಭಾಗವಹಿಸಿದ ಬಗ್ಗೆ ದಾಖಲಾತಿಗಳು ಇರುವುದಿಲ್ಲ. ನಿಪಿ 2 ರ ದಾಖಲಾತಿಯಲ್ಲಿ ನಮುದಾಗಿರುವಂತಹ ಸಾಕ್ಷಿದಾರರು ಮತ್ತು ದಸ್ತೂರ ಬರಹಗಾರರನ್ನು ನಾನು ನೋಡಿರುವುದಿಲ್ಲ. ಗಿರಿಯಪ್ಪಗೌಡ ಹನುಮಂತಗೌಡ ಪಾಟೀಲ ಸಾಃ ಕುನ್ನೂರ ಇವರನ್ನು ಸಹ ನಾನು ನೋಡಿರುವುದಿಲ್ಲ ಅಂದರೆ ಸರಿ. ಗಿರಿಯಪ್ಪಗೌಡ ಹನುಮಂತಗೌಡ ಪಾಟೀಲ ಹಾಗೂ ನಿಪಿ 2 ರ ದಾಖಲಾತಿಯಲ್ಲಿ ನಮೂದಿಸಿರುವ ಸಾಕ್ಷಿದಾರರನ್ನು ಮತ್ತು ದಸ್ತೂರ

ಬರಹಗಾರರನ್ನು ಮಹಾವಾಖ್ಯಾನಂದ ಸ್ವಾಮೀಗಳು, ಹರ್ಷಾನಂದ ಸ್ವಾಮೀಗಳು ಹಾಗೂ ಶಾಂತಿಮಯಾನಂದ ಸ್ವಾಮೀಗಳು ನೋಡಿರುವುದಿಲ್ಲ. 2011 ರ ಸಾಲಿನಲ್ಲಿ ಶ್ರೀಮಠದ ಕಾರ್ಯದರ್ಶಿಗಳು ಶ್ರೀ ಶಾಂತೀಮಯಾನಂದ ಸ್ವಾಮೀಗಳು ಇದ್ದರು. ಹನುಮಂತಗೌಡ ಪಾಟೀಲ ಇವರ ವಾರಸುದಾರರರಾದ ಮಲ್ಲಿಕಾರ್ಜುನಗೌಡ, ಶಂಕರಗೌಡ, ಶಂಕ್ರವ್ವ ಪಾರ್ವತೆವ್ವ, ದಮಯಂತವ್ವ ಹಾಗೂ ಕಾಶವ್ವ ಇವರನ್ನು ನಾನು ಮತ್ತು ಈ ಮೂರು ಜನ ಸ್ವಾಮೀಗಳು ಸಹ ನೋಡಿರುವುದಿಲ್ಲ. ಇವರ ಸಂಬಂಧಿಗಳು ಯಾವ ಯಾವ ಊರಿನಲ್ಲಿ ಇರುವರು ಎಂಬುದರ ಬಗ್ಗೆ ನನಗೂ ಹಾಗೂ ನಮ್ಮ ಸ್ವಾಮೀಗಳಿಗೂ ಗೊತ್ತಿರುವುದಿಲ್ಲ.

ಕುನ್ನೂರ ಗ್ರಾಮದ ಯಾವುದೇ ವ್ಯಕ್ತಿಗಳು ಪರಿಚಯ ಇರುವುದಿಲ್ಲ. ಆದರೆ ಶಂಕರಗೌಡ ಪಾಟೀಲ ಎಂಬುವರು ನಮ್ಮ ಮಠಕ್ಕೆ ಬಂದು ಈ ಮೃತ್ಯುಪತ್ರ ಮಾಡಿದ ಬಗ್ಗೆ ನಮ್ಮ ಮಠದ ಶಾಂತಿಮಯಾನಂದ ಸ್ವಾಮೀಗಳಿಗೆ ಜನವರಿ ತಿಂಗಳಿನ 2011 ರಲ್ಲಿ ಮಾಹಿತಿ ನೀಡಿರುವರು. ಈ ಶಂಕರಗೌಡ ಪಾಟೀಲ ಎಂಬುವರು ಈ ಮೃತ್ಯುಪತ್ರ ಮಾಡಿಕೊಟ್ಟ ಗಿರಿಯಪ್ಪಗೌಡನ ಸಂಬಂಧಿ ಆಗಿರುವರು. ಈ ಮಾಹಿತಿ ನೀಡಿದರ ಪೂರ್ಣ ಹೆಸರು ಶಂಕರಗೌಡ ಹನುಮಂತಗೌಡ ಪಾಟೀಲ ಅಂದರೆ ಇದ್ದಿರಬಹುದು ಎಂದು ಸಾಕ್ಷಿ ಉತ್ತರಿಸಿರುವರು. ನನಗೆ ಈ ವಿಷಯವು ಶ್ರೀ ಶಾಂತಿಮಯಾನಂದ ಸ್ವಾಮೀಗಳು ಹೇಳಿರುವುದರಿಂದ ನನಗೆ ಗೊತ್ತಾಗಿರುವುದು. ನಿಪಿ 2 ರ ದಾಖಲೆಯಲ್ಲಿ ಶಂಕರಗೌಡ ತಂದೆ ಹನುಮಂತಗೌಡ ಪಾಟೀಲ ಎಂಬುವರು ಸಾಕ್ಷಿದಾರರು ಅಂತಾ ಅದರಲ್ಲಿ ನಮೂದು ಇರುವುದಿಲ್ಲ. ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸವಣೂರಿನ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಶ್ರೀ ಶಾಂತಿಮಯಾನಂದ ಸ್ವಾಮೀಗಳು ಆರಟಿಎಸ ಪ್ರಕರಣ ದಾಖಲು ಮಾಡಿದ್ದರು. ಆ ಆರಟಿಎಸ ಪ್ರಕರಣದಲ್ಲಿ ಶ್ರೀ

ಶಾಂತಿಮಯಾನಂದ ಸ್ವಾಮೀಗಳು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುವ



ಬಗ್ಗೆ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನನಗೆ ಕೇಳಿ ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಆ ಆರಟಿಎಸ ಪ್ರಕರಣದಲ್ಲಿ ಶ್ರೀ ಶಾಂತಿಮಯಾನಂದ ಸ್ವಾಮೀಗಳು ಅಗಸ್ಟ ತಿಂಗಳಿನ 2 ನೇ ವಾರ 2011 ರಲ್ಲಿ ಮಾಹಿತಿ ಬಂದಿರುವುದಾಗಿ ಎಂದು ನಮೂದು ಮಾಡಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿರುವರು. ನನಗೆ ನಮ್ಮ ಸ್ವಾಮೀಗಳು ಎಲ್ಲಾ ಮಾಹಿತಿ ನೀಡಿದರೂ ಸಹ ಸಮಯಕ್ಕೆ ತಕ್ಕ ಹಾಗೆ ತಪ್ಪಿಸಿಕೊಳ್ಳುವ ಸಲುವಾಗಿ ನನಗೆ ಮಾಹಿತಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಮೃತ್ಯುಪತ್ರ ಬರೆದುಕೊಟ್ಟಿರುವ ಬಗ್ಗೆ ಮಠಕ್ಕೆ ಬಂದು ಮಾಹಿತಿ ನೀಡಿದವರಿಗೆ ನಾನಾಗಲೀ, ನಮ್ಮ ಸ್ವಾಮೀಜಿಗಳಾಗಲೀ ಮೃತ್ಯುಪತ್ರವನ್ನು ಯಾರು, ಯಾವಾಗ, ಎಲ್ಲಿ, ಹೇಗೆ ಬರೆದುಕೊಟ್ಟಿರುವರು ಎಂಬ ಬಗ್ಗೆ ವಿಚಾರಿಸಿರುವುದಿಲ್ಲ.

ನಮ್ಮ ಆಶ್ರಮದಲ್ಲಿ ಗಿರಿಯಪ್ಪಗೌಡ ತಂದೆ ಹನುಮಂತಗೌಡ ಪಾಟೀಲ ಇವರು ಸಹಿ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಿಪಿ 2 ರ ದಾಖಲೆಯಲ್ಲಿ ದಸ್ತೂರ ಬರಹಗಾರ ಹಾಗೂ ಅನುಪ್ರಮಾಣೀತ ಸಾಕ್ಷಿದಾರರ ಸಹಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಸಹಿಗಳು ನಮ್ಮ ಆಶ್ರಮದಲ್ಲಿ ಇರುವುದಿಲ್ಲ. ಗಿರಿಯಪ್ಪಗೌಡ ತಂದೆ ಹನುಮಂತಗೌಡ ಪಾಟೀಲ ಇವರು ಹುಟ್ಟಿದ ನಂತರ ಮೃತಪಡುವವರೆಗೂ ಯಾವ ರೀತಿ ಜೀವನ ನಡೆಸಿರುವರು ಎಂಬುದರ ಬಗ್ಗೆ ಮಹಾವಾಖ್ಯಾನಂದ ಸ್ವಾಮೀಗಳು ತಿಳಿದುಕೊಂಡಿರುವರು. ಅವರು ಜನರಿಂದ ಕೇಳಿ ತಿಳಿದುಕೊಂಡಿರುವರು. ಆದರೆ ನೋಟ್ಸ ಮಾಡಿಕೊಂಡಿರುವ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

ಗಿರಿಯಪ್ಪಗೌಡ ತಂದೆ ಹನುಮಂತಗೌಡ ಪಾಟೀಲ ಎಂಬುವನು ಈ ಭೂವಿಯಲ್ಲಿ ಇರತಕ್ಕಂತಹ ಎಲ್ಲ ದುಶ್ಚಟಗಳಿಗೆ ಒಳಗಾಗಿರುವ ಬಗ್ಗೆ ನಿಮಗೆ ಸ್ವಂತಕ್ಕೆ ಮಾಹಿತಿ ಇರುವುದೇ

ಎಂಬ ಪ್ರಶ್ನೆಗೆ ಸಾಕ್ಷಿ ಇರುವುದಿಲ್ಲ ಎಂದು ಉತ್ತರಿಸಿರುವರು. ನಮ್ಮ ಮಠದ ಸ್ವಾಮೀಗಳಿಗೆ ಈ



ಮೃತ್ಯುಪತ್ರದ ಬಗ್ಗೆ ಮಾಹಿತಿ ನೀಡಿರತಕ್ಕಂತಹ ನಿಪಿ 2 ರ ಅನುಪ್ರಮಾಣೀತ ಸಾಕ್ಷಿದಾರರು ಕೂಡಿಕೊಂಡು ಗಿರಿಯಪ್ಪಗೌಡನ ಕಡೆಯಿಂದ ಖೊಟ್ಟಿಯಾದ ಮೃತ್ಯುಪತ್ರವನ್ನು ಸೃಷ್ಟಿ ಮಾಡಿಕೊಂಡಿರುವರು ಅಂದರೆ ಸರಿಯಲ್ಲ. ಈ ಮೂಲ ಮೃತ್ಯುಪತ್ರವು 1 ನೇ ಪ್ರತಿವಾದಿಯ ಹತ್ತಿರ ಇರುವುದಾಗಿ ಎಂದು ಅನುಪ್ರಮಾಣೀತ ಸಾಕ್ಷಿದಾರರರಾದ ಶಂಕರಗೌಡ ಪಾಟೀಲ ಇವರು ಶ್ರೀ ಶಾಂತಿಮಯಾನಂದ ಸ್ವಾಮೀಜೆಗಳಿಗೆ ಹೇಳಿರುವರು. ನಿಪಿ 2 ರ ದಾಖಲಾತಿಯ ಮೇಲೆ 1 ನೇ ಪ್ರತಿವಾದಿಯು ಸಹಿ ಮಾಡಿರುವುದಿಲ್ಲ. ಮೃತ ಗಿರಿಯಪ್ಪಗೌಡ ಮತ್ತು 1 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಾಗಿರುವುದರಿಂದ ಮೃತ್ಯುಪತ್ರವು 1 ನೇ ಪ್ರತಿವಾದಿಯ ಹತ್ತಿರ ಬಂದಿರುವುದು. ಮೃತ ಗಿರಿಯಪ್ಪಗೌಡ, 1 ನೇ ಪ್ರತಿವಾದಿ ಹಾಗೂ ಇತನ ತಂದೆ ಮಲ್ಲಿಕಾರ್ಜುನಗೌಡ ಒಂದೇ ಮನೆಯಲ್ಲಿ ವಾಸವಾಗಿರುವುದರಿಂದ ಗಿರಿಯಪ್ಪಗೌಡನ ಆಗುಹೋಗುಗಳನ್ನು 1 ನೇ ಪ್ರತಿವಾದಿ ಹಾಗೂ ಇತನ ತಂದೆ ಮಲ್ಲಿಕಾರ್ಜುನಗೌಡ ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ಈ ದಾವಾ 3 ಜಮೀನುಗಳನ್ನು 1 ನೇ ಪ್ರತಿವಾದಿ ಹಾಗೂ ಆತನ ತಂದೆ ನೋಡಿಕೊಳ್ಳುತ್ತಿದ್ದರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು.

ಮುಂದಿನ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಅಸಲು ದಾವಾ  ನಂ.174/2017
ಪಿಡಬ್ಲು 1

ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.